ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1424
2. ಸದಸ್ಯರ ಹೆಸರು : ಶ್ರೀ ಹೆಚ್.ಎಂ. ರಮೇಶ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 19.03.2020
4. ಉತ್ತರಿಸುವ ಸಚಿವರು : ಜಲಸಂಪನ್ಮೂಲ ಸಚಿವರು

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ)	ಭದ್ರಾ ಮೇಲ್ದಂಡೆ ಯೋಜನೆಯ ಪ್ರಸ್ತುತ ಸ್ಥಿತಿಯೇನು; ಭದ್ರಾ ಮೇಲ್ದಂಡೆ ಯೋಜನೆಗೆ ಪ್ರಸಕ್ತ ಸಾಲಿನಲ್ಲಿ ಮಂಜೂರಾದ ಅನುದಾನ ಬಿಡುಗಡೆಯಾದ ಅನುದಾನ ಹಾಗೂ ಬಾಕಿ ಉಳಿದಿರುವ ಅನುದಾನವೆಷ್ಟು; ಬಾಕಿ ಉಳಿಯಲು ಕಾರಣಗಳೇನು; (ಲೆಕ್ಕ ಶೀರ್ಷಿಕೆವಾರು ಸಂಪೂರ್ಣ ವಿವರ ನೀಡುವುದು)	ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಲಾಗಿದೆ.
ಆ)	ಭದ್ರಾ ಮೇಲ್ದಂಡೆ ಯೋಜನೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಕೈಗೊಂಡ ಕಾಮಗಾರಿಗಳ ವಿವರವನ್ನು ದಾಖಲೆ ಸಹಿತ ನೀಡುವುದು; (ತಾಲ್ಲೂಕು ವಾರು ಮಾಹಿತಿ ನೀಡುವುದು)	ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಲಾಗಿದೆ.
ಇ)	ತುಮಕೂರಿನಲ್ಲಿ ಎತ್ತಿನಹೊಳೆ ಯೋಜನೆಯಲ್ಲಿ ಕೊರಟಗೆರೆ ತಾಲ್ಲೂಕಿನ ಭೈರಗೊಂಡ್ಲು ಬಫರ್ ಡ್ಯಾಂ ಕಾಮಗಾರಿಯಲ್ಲಿ ಅವ್ಯವಹಾರ ನಡೆದಿದೆ ಎನ್ನುವ ದೂರುಗಳು ಕೇಳಿಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಹಾಗಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು?	ಯಾವುದೇ ದೂರುಗಳು ಸ್ವೀಕೃತವಾಗಿರುವುದಿಲ್ಲ.

ಸಂಖ್ಯೆ: ಜಸಂಇ 32 ಡಬ್ಲ್ಯೂಎಲ್ಎ 2020

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು
(ಬೃಹತ್ ಮತ್ತು ಮಧ್ಯಮ ನೀರಾವರಿ)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1424ಗೆ ಅನುಬಂಧ-1

ಭದ್ರಾ ಮೇಲ್ದಂಡೆ ಯೋಜನೆಯನ್ನು ಮಧ್ಯ ಕರ್ನಾಟಕದ ಬರಪೀಡಿತ ಚಿತ್ರದುರ್ಗ, ಚಿಕ್ಕಮಗಳೂರು, ದಾವಣಗೆರೆ ಹಾಗೂ ತುಮಕೂರು ಜಿಲ್ಲೆಯಲ್ಲಿನ 2,25,515 ಹೆಕ್ಟೇರ್ (5,57,022 ಎಕರೆ) ಭೂ ಪ್ರದೇಶಕ್ಕೆ ಹನಿ ನೀರಾವರಿ ಪದ್ಧತಿಯಲ್ಲಿ ನೀರಾವರಿ ಸೌಲಭ್ಯ ಕಲ್ಪಿಸಲು ಹಾಗೂ 367 ಕೆರೆಗಳಿಗೆ ನೀರನ್ನು 29.9 ಟಿ.ಎಂ.ಸಿ. ನೀರಿನ ಉಪಯೋಗದೊಂದಿಗೆ ಒದಗಿಸಲು ಉದ್ದೇಶಿಸಿ ರೂಪಿಸಲಾಗಿರುತ್ತದೆ. ಈ ಯೋಜನೆಯ ಪರಿಷ್ಕೃತ ವಿವರವಾದ ಯೋಜನಾ ವರದಿಯ ಅಂದಾಜು ಮೊತ್ತ ರೂ.12340.00 ಕೋಟಿಗಳಾಗಿದ್ದು ದಿನಾಂಕ:06.03.2015 ರಂದು ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.

1) ಭೌತಿಕ ಪ್ರಗತಿ :

(i) ಹಂತ-1

ಪ್ರಥಮ ಹಂತದಲ್ಲಿ ಈ ಕೆಳಗಿನ ಮೂರು ಪ್ರಮುಖ ಕಾಮಗಾರಿಗಳನ್ನು ರೂ.1580 ಕೋಟಿ ಮೊತ್ತದಲ್ಲಿ 2008ರಲ್ಲಿ ಕೈಗೆತ್ತಿಕೊಳ್ಳಲಾಗಿದ್ದು ಪ್ರಗತಿಯಲ್ಲಿರುತ್ತವೆ.

1. ತುಂಗಾ ನದಿಯಿಂದ ಭದ್ರಾ ಜಲಾಶಯಕ್ಕೆ ಲಿಫ್ಟ್ ಮಾಡುವುದು (ಪ್ಯಾಕೇಜ್-1) : ಪ್ರಗತಿಯಲ್ಲಿದೆ.
2. ಭದ್ರಾ ಜಲಾಶಯದಿಂದ ಅಜ್ಜಂಪುರ ಸುರಂಗದವರೆಗೆ ನೀರನ್ನು ಲಿಫ್ಟ್ ಮಾಡುವುದು (ಪ್ಯಾಕೇಜ್-2) : ಮುಕ್ತಾಯವಾಗಿದೆ.
3. ಅಜ್ಜಂಪುರ ಸುರಂಗ ನಿರ್ಮಾಣ (ಪ್ಯಾಕೇಜ್-3) : ಮುಕ್ತಾಯವಾಗಿದೆ.

ಭದ್ರಾ ಜಲಾಶಯದಿಂದ ಅಜ್ಜಂಪುರ ಸುರಂಗದ ಮೂಲಕ ನೀರನ್ನು ದಿನಾಂಕ:03.10.2019 ರಿಂದ ವಾಣಿವಿಲಾಸ ಸಾಗರಕ್ಕೆ ಹರಿಸಿ ಯೋಜನೆಯನ್ನು ಪ್ರಾರಂಭಿಸಲಾಗಿದೆ.

(ii) ಹಂತ-2

ಎರಡನೇ ಹಂತದಲ್ಲಿ ತರೀಕೆರೆ ಏತ ನೀರಾವರಿ, ಚಿತ್ರದುರ್ಗ ಶಾಖಾ ಕಾಲುವೆ ಮತ್ತು ತುಮಕೂರು ಶಾಖಾ ಕಾಲುವೆ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು, ಪ್ರಸ್ತುತ ಹಂತ ಕೆಳಗೆ ಕಾಣಿಸಲಾಗಿದೆ.

- **ತರೀಕೆರೆ ಏತ ನೀರಾವರಿ ಯೋಜನೆ:** ತರೀಕೆರೆ ತಾಲ್ಲೂಕಿನ 79 ಕೆರೆಗಳನ್ನು ತುಂಬಿಸಲು ಮತ್ತು 20150 ಹೆ. ಪ್ರದೇಶಕ್ಕೆ ಹನಿ ನೀರಾವರಿ ಪದ್ಧತಿಯಲ್ಲಿ ನೀರೊದಗಿಸುವ ರೂ.812.02 ಕೋಟಿ ಮೊತ್ತದ ತರೀಕೆರೆ ಏತ ನೀರಾವರಿ ಯೋಜನಾ ಕಾಮಗಾರಿಗಳು ಪ್ರಗತಿಯಲ್ಲಿವೆ.
- **ಚಿತ್ರದುರ್ಗ ಶಾಖಾ ಕಾಲುವೆಯ** ಕಿ.ಮೀ 0 ರಿಂದ ಕಿ.ಮೀ 134.597 ರವರೆಗಿನ ರೂ.1599.74 ಕೋಟಿ ಮೊತ್ತದ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.
- **ತುಮಕೂರು ಶಾಖಾ ಕಾಲುವೆಯ** 160 ಕಿ.ಮೀ ವರೆಗಿನ ರೂ.1107.46 ಕೋಟಿ ಮೊತ್ತದ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.
- **ಹನಿ ನೀರಾವರಿ:** ಚಿತ್ರದುರ್ಗ ಶಾಖಾ ಕಾಲುವೆಯ ಕಿ.ಮೀ. 0.00 ರಿಂದ ಕಿಮೀ 60.00 ರ ವರೆಗಿನ 36000 ಹೆ. ಪ್ರದೇಶಕ್ಕೆ ಹನಿ ನೀರಾವರಿ ಸೌಲಭ್ಯ ಕಲ್ಪಿಸುವುದಕ್ಕಾಗಿ ಸರ್ವೆ ಮತ್ತು ತನಿಖಾ ಕಾರ್ಯಗಳನ್ನು ಕೈಗೊಂಡು ಅಂದಾಜು ಪತ್ರಿಕೆ ತಯಾರಿಸಲಾಗಿದೆ.
- **ಹೊಳಲ್ಕೆರೆ ಫೀಡರ್ ಕಾಲುವೆ:** ಚಿತ್ರದುರ್ಗ ಶಾಖಾ ಕಾಲುವೆಯಡಿ ಬರುವ ಹೊಳಲ್ಕೆರೆ ಫೀಡರ್ ಕಾಲುವೆಯ ಕಾಮಗಾರಿಯು ಪ್ರಗತಿಯಲ್ಲಿದೆ.
- **ಕೆರೆ ತುಂಬಿಸುವ ಕಾಮಗಾರಿಗಳು:** ಪಾವಗಡ, ಚಳ್ಳಕೆರೆ ಮತ್ತು ಮೊಳಕಾಲ್ಮೂರು ತಾಲ್ಲೂಕುಗಳಲ್ಲಿ ಕೆರೆ ತುಂಬಿಸುವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.
- **ಶಿರಾ ಮತ್ತು ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ** ಕೆರೆ ತುಂಬಿಸುವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಕ್ರಮ ತೆಗೆದುಕೊಳ್ಳಲಾಗಿದೆ.
- **ಜಗಳೂರು ತಾಲ್ಲೂಕಿನಲ್ಲಿ ಮತ್ತು ಚಿತ್ರದುರ್ಗ ತಾಲ್ಲೂಕಿನಲ್ಲಿ** ಕೆರೆ ತುಂಬಿಸುವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಕ್ರಮ ತೆಗೆದುಕೊಳ್ಳಲಾಗಿದೆ.

2. **ಆರ್ಥಿಕ ಪ್ರಗತಿ:** ಭದ್ರಾ ಮೇಲ್ದಂಡೆ ಯೋಜನೆಗೆ 2019-20 ನೇ ಸಾಲಿನಲ್ಲಿ 4701 ಲೆಕ್ಕಶೀರ್ಷಿಕೆಯಡಿ ಮಾತ್ರ ಅನುದಾನ ಹಂಚಿಕೆ ಮಾಡಲಾಗಿದೆ. ಪ್ರಸಕ್ತ ಸಾಲಿನಲ್ಲಿ ಹಂಚಿಕೆಯಾದ ಅನುದಾನ:-ರೂ.721.00 ಕೋಟಿಗಳು, ಬಿಡುಗಡೆ/ವೆಚ್ಚ :- ರೂ.835.74 ಕೋಟಿಗಳು. ಯಾವುದೇ ಅನುದಾನ ಬಾಕಿ ಉಳಿದಿರುವುದಿಲ್ಲ.

*****

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1424ಗೆ ಅನುಬಂಧ–2

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಭದ್ರಾ ಮೇಲ್ದಂಡೆ ಯೋಜನೆ ವಲಯ ವ್ಯಾಪ್ತಿಯಡಿಯಲ್ಲಿ ಭದ್ರಾ ಮೇಲ್ದಂಡೆ ಯೋಜನೆಯಡಿ ಪ್ರಸಕ್ತ ಸಾಲಿನಲ್ಲಿ ಕೈಗೊಂಡ ಕಾಮಗಾರಿಯ ವಿವರಗಳು

ರೂ. ಕೋಟಿಗಳಲ್ಲಿ

ಕ್ರ ಸಂ	ಕಾಮಗಾರಿಯ ಹೆಸರು	ತಾಲ್ಲೂಕು	ಕರಾರು ಒಪ್ಪಂದದ ದಿನಾಂಕ	ಗುತ್ತಿಗೆ ಮೊತ್ತ	ಷರಾ
1.	ತುಮಕೂರು ಶಾಖಾ ಕಾಲುವೆ ಪ್ಯಾಕೇಜ್–4 (ಚೈ.47.00 ಯಿಂದ 61.00 ಕಿ.ಮೀ)	ಕಡೂರು	17–05–2019	112.23	ಕರಾರು ಒಪ್ಪಂದ ಮಾಡಿಕೊಳ್ಳಲಾಗಿದ್ದು, ಕಾಮಗಾರಿ ಪ್ರಾರಂಭಿಕ ಹಂತದಲ್ಲಿದೆ.
2.	ತುಮಕೂರು ಶಾಖಾ ಕಾಲುವೆ ಪ್ಯಾಕೇಜ್–5 (ಚೈ.61.00 ಯಿಂದ 84.00 ಕಿ.ಮೀ)	ಕಡೂರು	17–05–2019	202.02	
3.	ತುಮಕೂರು ಶಾಖಾ ಕಾಲುವೆ ಪ್ಯಾಕೇಜ್–7 (ಚೈ.98.00 ಯಿಂದ 108.00 ಕಿ.ಮೀ)	ಹೊಸದುರ್ಗ	09–05–2019	102.25	
4.	ತುಮಕೂರು ಶಾಖಾ ಕಾಲುವೆ ಪ್ಯಾಕೇಜ್–8 (ಚೈ.108.00 ಯಿಂದ 135.00 ಕಿ.ಮೀ)	ಚಿಕ್ಕನಾಯಕನಹಳ್ಳಿ	07–01–2020	174.20	
5.	ತುಮಕೂರು ಶಾಖಾ ಕಾಲುವೆ ಪ್ಯಾಕೇಜ್–9 (ಚೈ.135.00 ಯಿಂದ 159.684 ಕಿ.ಮೀ)	ಚಿಕ್ಕನಾಯಕನಹಳ್ಳಿ/ ಶಿರಾ	08–01–2020	168.60	
6.	ಹೊಳಲ್ಕೆರೆ ಫೀಡರ್ ಕಾಲುವೆ ಪ್ಯಾಕೇಜ್–2 (22 ಕೆರೆಗಳನ್ನು ತುಂಬಿಸುವುದು)	ಹೊಳಲ್ಕೆರೆ	22–05–2019	118.50	
7.	ಪಾವಗಡ–ಚಳ್ಳಕೆರೆ ತಾಲ್ಲೂಕಿನ ಕೆರೆಗಳಿಗೆ ಪೈಪ್ ಲೈನ್ ಮೂಲಕ ನೀರುತುಂಬಿಸುವ ಯೋಜನೆ	ಪಾವಗಡ/ ಚಳ್ಳಕೆರೆ	01–01–2020	632.45	
8.	ಚಳ್ಳಕೆರೆ–ಮೊಳಕಾಲ್ಮೂರು ತಾಲ್ಲೂಕಿನ ಕೆರೆಗಳಿಗೆ ಪೈಪ್ ಲೈನ್ ಮೂಲಕ ನೀರುತುಂಬಿಸುವ ಯೋಜನೆ	ಚಳ್ಳಕೆರೆ/ ಮೊಳಕಾಲ್ಮೂರು	05–02–2020	538.71	
9.	ರಾಣೀ ಕೆರೆ ಫಿಡರ್ ಲೈನ್ ಮೂಲಕ ಕೆರೆಗಳಿಗೆ ನೀರು ತುಂಬಿಸುವ ಕಾಮಗಾರಿ	ಚಳ್ಳಕೆರೆ	27–12–2019	108.213	
10.	ಸಾಣೀ ಕೆರೆ ಫಿಡರ್ ಲೈನ್ ಮೂಲಕ ಕೆರೆಗಳಿಗೆ ನೀರು ತುಂಬಿಸುವ ಕಾಮಗಾರಿ	ಚಳ್ಳಕೆರೆ	27–12–2019	58.954	

*****